ಭಾರತದಲ್ಲಿ ಜನಿಸಲು ಸಕಾಲ: ಕೆ.ವಿ.ಕಾಮತ್

ಮಣಿಪಾಲ ಎಂಐಟಿಯ ಸಿಐಎಫ್‌ನ್ನು ಉದ್ಘಾಟಿಸಿದ ಕೆ.ವಿ.ಕಾಮತ್ ಅವರು ರಾಜ್ಯ ಮಟ್ಟದ ಬಿಸಿನೆಸ್ ಪ್ಲಾನ್ ಸ್ಪರ್ಧೆಯಲ್ಲಿ (ಪ್ರೊವೆನ್ಸ್2012) ವಿಜೇತರಾದವರಿಗೆ ಬಹುಮಾನ ವಿತರಿಸಿದರು.

ಉಡುಪಿ, ಫೆ. 16: ಭಾರತದಲ್ಲಿ ಜನಿಸಲು ಈಗಿಗಿಂತ ಉತ್ತಮ ಕಾಲ ಇನ್ನೊಂದಿಲ್ಲ ಎಂದು ಇನ್ಫೋಸಿಸ್ ಅಧ್ಯಕ್ಷ, ಐಸಿಐಸಿಐ ಕಾರ್ಯನಿರ್ವಾಹಕೇತರ ಅಧ್ಯಕ್ಷ ಕೆ.ವಿ.ಕಾಮತ್ ಹೇಳಿದ್ದಾರೆ.

ಮಣಿಪಾಲ ಎಂಐಟಿ ಸಂಶೋಧನಾ ಸೌಲಭ್ಯವಾದ ಸೆಂಟ್ರಲ್ ಇನ್‌ಸ್ಟ್ರುಮೆಂಟೇಶನ್ ಸೌಲಭ್ಯವನ್ನು (ಸಿಐಎಫ್) ಶನಿವಾರ ಉದಾಟಿಸಿ ಮಾತನಾಡಿದ ಅವರು ಭಾರತದ ಅಭಿವೃದ್ಧಿ ಮುಂದಿನ ಎರಡು ದಶಕಗಳಿಗೂ ಹೆಚ್ಚು ಮುಂದುವರಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೇಶದ ಉಜ್ವಲ ಭವಿಷ್ಯವನ್ನು ವಿವರಿಸಿದ ಅವರು ಸಾಕಷ್ಟು ಅಡೆತಡೆಗಳು ಇವೆ. ಮಾಧ್ಯಮಗಳು ಕೇವಲ ನೇತ್ಯಾತ್ಮಕ ಅಂಶಗಳನ್ನು ಮಾತ್ರ ವೈಭವೀಕರಿಸುತ್ತಿವೆ. ಆದ್ದರಿಂದ ನಮಗೆ ಸಕಾರಾತ್ಮಕ ಅಂಶಗಳು ಕಾಣುತ್ತಿಲ್ಲ. ದೇಶದ ಪ್ರಗತಿ ಆರೋಗ್ಯಕರವಾಗಿ ಮುಂದುವರಿಯುತ್ತಿದೆ ಎಂದರು.

ಇದೇ ವೇಳೆ ಮಣಿಪಾಲ ಯುನಿವರ್ಸಿಟಿ ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್ ಆಯೋಜಿಸಿದ ರಾಜ್ಯ ಮಟ್ಟದ ಬಿಸಿನೆಸ್ ಪ್ಲಾನ್ ಸ್ಪರ್ಧೆಯಲ್ಲಿ (ಪ್ರೊವೆನ್ಸ್ 2012) ವಿಜೇತರಾದವರಿಗೆ ಕಾಮತ್ ಬಹುಮಾನ ವಿತರಿಸಿದರು. ಮಾಸ್ಟರ್ ಮೈಂಡ್ ಸೊಲುಶನ್ಸ್, ಆಪ್ಟಿಕ್ಯೂರ್, ಪೇಪರ್‌ಟ್ರೀ, ಅಪೆವರ್ಡ್ ಈ ನಾಲ್ಕು ವಾಣಿಜ್ಯ ಪ್ರಸ್ತಾವಗಳು ಬಹುಮಾನ ಗಳಿಸಿದವು.

ಮಣಿಪಾಲ ವಿ.ವಿ. ಕುಲಾಧಿಪತಿ ಡಾ| ರಾಮದಾಸ್ ಎಂ. ಪೈ ಉಪಸ್ಥಿತರಿದ್ದರು. ಸಹಕುಲಾಧಿಪತಿ ಡಾ| ಎಚ್.ಎಸ್.ಬಲ್ಲಾಳ್ ಸ್ವಾಗತಿಸಿ, ಸಹಕುಲಪತಿ ಡಾ|ಎಚ್.ವಿನೋದ ಭಟ್ ಅತಿಥಿಗಳನ್ನು ಪರಿಚಯಿಸಿದರು. ಎಂಐಟಿ ನಿರ್ದೇಶಕ ಡಾ|ವಿನೋದ್ ವಿ. ಥಾಮಸ್ ವಂದಿಸಿದರು. ಇನ್‌ಕ್ಯುಬೇಟರ್ ಸಿಇಒ, ಕಾರ್ಯದರ್ಶಿ ಡಾ| ಮನೋಹರ ಪೈ ಎಂ.ಎಂ. ಪ್ರಸ್ತಾವನೆಗೈದರು.

ನನ್ನ ರಾಜೀನಾಮೆ ಅಥವಾ ಸ್ಪರ್ಧೆ ಇವೆರಡೂ ಪಕ್ಷದ ನಿರ್ಧಾರ: ಡಿ.ವಿ

ಪುತ್ತೂರು, ಫೆ. 16: ನಾನು ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದು ಅಥವಾ ವಿಧಾನಸಭೆಗೆ ಸ್ಪರ್ಧಿಸುವುದು ಇವೆರಡೂ ಬಿಜೆಪಿ ವರಿಷ್ಠ ನಾಯಕರ ತೀರ್ಮಾನದಂತೆ ನಡೆಯುತ್ತದೆ. ಅದರಲ್ಲಿ ನನ್ನ ವೈಯಕ್ತಿಕ ನಿರ್ಧಾರದ ಪ್ರಶ್ನೆ ಇಲ್ಲ ಎಂದು ಹೇಳಿದ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ನನ್ನ ರಾಜಕೀಯ ಶಕ್ತಿ ಕುಂದಿಸಲು ಯತ್ನಿಸುತ್ತಿರುವ ಹತಾಶರು ಕೆಲವು ಗಾಳಿ ಸುದ್ದಿಗಳನ್ನು ಹಬ್ಬುತ್ತಾರೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಹಬ್ಬಿರುವ ವದಂತಿಗಳಲ್ಲಿ ಯಾವುದೇ ಹುರುಳಿಲ್ಲ ಎಂದರು. ಈ ಬಾರಿ ವಿಧಾನ ಸಭೆ ಚುನಾವಣೆಯನ್ನು ಬಿಜೆಪಿ ಏಕಾಂಗಿ ಯಾಗಿ ಎದುರಿಸಲಿದೆ. ಯಾವುದೇ ಪಕ್ಷದೊಂದಿಗೆ ಸೀಟು ಹಂಚಿಕೆ ಅಥವಾ ಹೊಂದಾಣಿಕೆ ಪ್ರಶ್ನೆ ಬಿಜೆಪಿಯ ಮುಂದಿಲ್ಲ. ಬಿಜೆಪಿ ಸ್ವತಂತ್ರವಾಗಿ ಚುನಾವಣೆಯನ್ನು ಎದುರಿಸಿ ಗೆಲುವು ಸಾಧಿಸಲಿದೆ ಎಂದರು.

ಇನ್ನು ಹತ್ತು ದಿನಗಳಲ್ಲಿ ರಾಜ್ಯ ಬಿಜೆಪಿ ವಿಧಾನಸಭಾ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳ್ಳಲಿದೆ. ಅಭ್ಯರ್ಥಿಗಳ ಆಯ್ಕೆಯ ಕುರಿತು ಪಕ್ಷದಲ್ಲಿ ಗೊಂದಲ ಇಲ್ಲ. ಕಾರ್ಯಕರ್ತರ ಅಭಿಪ್ರಾಯದಂತೆ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ ಎಂದು ಡಿ.ವಿ. ಸದಾನಂದ ಗೌಡ ಹೇಳಿದರು.

ಸಮಾವೇಶದಲ್ಲಿ ಸಚಿವ ರೆಹಮಾನ್ ಖಾನ್ ಮಾತನಾಡಿದರು.

ಸಮಾನ ಅವಕಾಶ ಕಾಯ್ದೆ ಜಾರಿಗೆ ಚಿಂತನೆ

ಸಚಿವ ರೆಹ್ಮಾನ್ ಖಾನ್

ಉಡುಪಿ, ಫೆ. 16: ಸಾಚಾರ್ ಸಮಿತಿ ಶಿಫಾರಸಿನಂತೆ ಸಮಾನ ಅವಕಾಶ ಕಾಯ್ದೆ ಜಾರಿಗೆ ಕೇಂದ್ರ ಸರಕಾರ ಚಿಂತನೆ ನಡೆಸಿದ್ದು, ಈ ಕಾಯ್ದೆಯನ್ನು ಮುಂದಿನ ಸಂಸತ್ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಕೇಂದ್ರ ಸಚಿವ ಕೆ. ರೆಹ್ಮಾನ್ ಖಾನ್ ಹೇಳಿದರು.

ಜಿಲ್ಲಾ ಮುಸ್ಲಿಂ ಒಕ್ಕೂಟದ ವತಿಯಿಂದ ಉಡುಪಿಯ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸಭಾಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ 'ಉಜ್ವಲ ಭವಿಷ್ಯದೆಡೆಗೆ ಮುಸ್ಲಿಂ' ಸಮಾವೇಶದ ವಿಷಯ ಮಂಡನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮುಸ್ಲಿಂ ಸಮುದಾಯದ ಅಭಿವೃದ್ಧಿಗಾಗಿ ಸಾಚಾರ್ ವರದಿ ಪ್ರಕಾರ 86 ಯೋಜನಾ ಶಿಫಾರಸ್ಸು ಕೇಂದ್ರಕ್ಕೆ ಸಲ್ಲಿಕೆಯಾಗಿತ್ತು. ಇದರಲ್ಲಿ 82ನ್ನು ಕೇಂದ್ರ ಒಪ್ಪಿಕೊಂಡಿದೆ. ಈಗಾಗಲೇ 70ನ್ನು ಅನುಷ್ಠಾನಗೊಳಿಸಲಾಗಿದೆ. ಆದರೆ ಈ ಯೋಜನೆ ಸಮುದಾಯಕ್ಕೆ ಎಷ್ಟರ ಮಟ್ಟಿಗೆ ತಲುಪಿದೆ ಎನ್ನುವ ಬಗ್ಗೆ ಮುಕ್ತ ಅವಲೋಕನ ಆಗಬೇಕಿದೆ. ಮುಸ್ಲಿಂ ಸಮುದಾಯದ ಸದೃಢತೆಗಾಗಿ ನಮ್ಮೆಲ್ಲರ ತೊಡಗಿಸಿಕೊಳ್ಳುವಿಕೆ, ಜವಾಬ್ದಾರಿ ಹೆಚ್ಚಿದೆ. ಸಂವಿಧಾನಾತ್ಮಕವಾಗಿ ಮುಸ್ಲಿಂ ಸಮುದಾಯದ ಸಶಕ್ತೀಕರಣಕ್ಕೆ ಮುಸ್ಲಿಂ ಸಂಘಟನೆ, ಒಕ್ಕೂಟಗಳ ಸಲಹೆಗಳನ್ನು ಸ್ವೀಕರಿಸಿ ಅದರ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಖಾನ್ ಹೇಳಿದರು.

'ಉಜ್ವಲ ಭವಿಷ್ಯಕ್ಕಾಗಿ ಸಾಮುದಾಯಿಕ ಕಾರ್ಯಸೂಚಿ' ಎನ್ನುವ ಬಗ್ಗೆ ಪತ್ರಕರ್ತ ಅಬ್ದುಸ್ಸಲಾಮ್ ಪುತ್ತಿಗೆ ವಿಷಯ ಮಂಡಿಸಿದರು. ಮಂಗಳೂರು ಖಾಝಿ ಅಲ್ ಹಾಜ್ ತ್ವಾಖಾ ಅಹ್ಮದ್ ಮುಸ್ಲಿಯಾರ್, ಕರ್ನಾಟಕ ಮತೀಯ ಸೌಹಾರ್ದ ಸಂದೇಶ ವೇದಿಕೆಯ ಸಂಚಾಲಕ ಉಮ್ಮರ್ ಕುಂಞಿ ಮುಸ್ಲಿಯಾರ್ ಬೆಳ್ತಂಗಡಿ, ಮುಸ್ಲಿಂ ಮುಖಂಡ ಮೊೖದಿನ್ ಬಾವಾ, ಎಂ.ಎ. ಗಫೂರ್, ಜಿಲ್ಲಾ ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಎಂ.ಪಿ. ಮೊೖದಿನಬ್ಬ, ಹಿರಿಯ ಉಪಾಧ್ಯಕ್ಷ ಅಬ್ದುಲ್ಲಾ ಪರ್ಕಳ, ಕಾರ್ಯದರ್ಶಿ ಅಬ್ದುಲ್ ರಶೀದ್, ಖಾಸಿಂ ಬಾರ್ಕೂರು, ಮುಸ್ತಾಕ್ ಬೆಳ್ವೆ, ಮೊೖದಿನ್ ಭಟ್ಕಳ ಮೊದಲಾದವರು ಉಪಸ್ಥಿತರಿದ್ದರು.

ಸಮಾವೇಶದಲ್ಲಿ ಕೈಗೊಂಡ 10 ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಯಿತು. ಅಶ್ಫಕ್ ಅಹ್ಮದ್ ಕಾರ್ಕಳ ಸ್ವಾಗತಿಸಿದರು. ಜಿ.ಎಂ. ಶರೀಫ್ ಕಾರ್ಯಕ್ರಮ ನಿರೂಪಿಸಿದರು.

(ಈ ವರದಿಯ ವೀಡಿಯೋ ಚಿತ್ರೀಕರಣವನ್ನು http://www.udayavani.com/Kannada¨ ದಲ್ಲಿ ವೀಕ್ಷಿಸಿರಿ)

ವಕ್ಫ್ ಅಭಿವೃದ್ಧಿ ನಿಗಮ:ಚಿಂತನೆ

ಹೆಚ್ಚಿನ ಎಲ್ಲ ಕಡೆಗಳಲ್ಲಿ ವಕ್ಫ್ ಆಸ್ತಿ ದುರುಪಯೋಗವಾಗುತ್ತಿರುವುದು ಕೇಳಿ ಬರುತ್ತಿದೆ. ವಕ್ಫ್ ಅಧೀನದ ಜಾಗಗಳನ್ನು ಕೂಡ ಒತ್ತುವರಿ ಮಾಡಿಕೊಳ್ಳುತ್ತಿರುವ ಪ್ರಸಂಗ ನಡೆಯುತ್ತಿದೆ. ಈ ಎಲ್ಲ ಆಸ್ತಿಗಳನ್ನು ಉಳಿಸಿಕೊಳ್ಳಲು ಮತ್ತು ಆದಾಯ ಬರುವಂತೆ ನೋಡಿಕೊಳ್ಳಲು ವಕ್ಫ್ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಕೇಂದ್ರ ಸರಕಾರ ಚಿಂತನೆ ನಡೆಸುತ್ತಿದೆ ಎಂದರು.

ಶಂಕಿತ ಉಗ್ರ ಕ್ರೈಂಬ್ರಾಂಚ್ ಕಸ್ಟಡಿಗೆ

ಕಾಸರಗೋಡು, ಫೆ. 16: ಮುಂಡಿತ್ತಡ್ಕ ಸಮೀಪದ ಗುಣಾಜೆಯಲ್ಲಿ ತಲೆಮರೆಸಿಕೊಂಡಿದ್ದ ಭಯೋತ್ಪಾದನೆ ಪ್ರಕರಣಗಳ ಆರೋಪಿ ಕರ್ನಾಟಕ ಪೊಲೀಸರಿಂದ ಬಂಧಿತನಾದ ವಯನಾಡು ಪಡಿಞಾರತ್ತರ ಪಡಿಂಞಾಲ್ ವೀಟಿಲ್‌ನ ಇಬ್ರಾಹಿಂ ಮೌಲವಿ ಯಾನೆ ಮೊಹಮ್ಮದಲಿ ಮೌಲವಿ(52)ಯನ್ನು ಹೆಚ್ಚಿನ ತನಿಖೆಗಾಗಿ ಕಾಸರಗೋಡು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಒಂದು ದಿನಕ್ಕೆ ಈ ಪ್ರಕರಣದ ತನಿಖೆ ನಡೆಸುತ್ತಿರುವ ಕಲ್ಲಿಕೋಟೆ ಕ್ರೈಂಬ್ರಾಂಚ್‌ನ ಸಿಬಿಸಿಐಡಿ ಡಿವೈಎಸ್‌ಪಿ ಎ.ಜಿ. ಬಾಬು ಅವರ ಕಸ್ಟಡಿಗೆ ಒಪ್ಪಿಸಿದೆ.

ದೇಲಂಪಾಡಿ: ನಕ್ಸಲರಿಗಾಗಿ ಶೋಧ

ಕಾಸರಗೋಡು, ಫೆ. 16: ಕರ್ನಾಟಕ – ಕೇರಳ ಗಡಿ ಪ್ರದೇಶದ ಅರಣ್ಯದಲ್ಲಿ ಅವಿತು ಪೊಲೀಸ್ ಠಾಣೆಗಳಿಗೆ ದಾಳಿ ನಡೆಸಲು ಹೊಂಚು ಹಾಕುತ್ತಿರುವ 40ರಷ್ಟು ಮಾವೋವಾದಿ ನಕ್ಸಲರ ಪೈಕಿ ಮೂವರನ್ನು ಪೊಲೀಸರು ಗುರುತಿಸಿದ್ದಾರೆ. ಗಡಿಪ್ರದೇಶಕ್ಕೆ ತಾಗಿಕೊಂಡಿರುವ ಕಾಸರಗೋಡು ಜಿಲ್ಲೆಯ ದೇಲಂಪಾಡಿ ಅರಣ್ಯದಲ್ಲಿ ನಕ್ಸಲರಿಗಾಗಿ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ. ಕಾಸರಗೋಡು, ಕಣ್ಣೂರು, ವಯನಾಡು, ಪಾಲ್ಘಾಟ್, ಮಲಪ್ಪುರ ಜಿಲ್ಲೆಗಳಲ್ಲಿ ಗರಿಷ್ಠ ಎಚ್ಚರಿಕೆಯಿಂದ ಇರುವಂತೆ ಗೃಹ ಖಾತೆ ಮತ್ತೆ ಎಚ್ಚರಿಕೆ ನೀಡಿದೆ.

ಶೂನ್ಯ ಸುಂಕದಲ್ಲಿ ಅಡಿಕೆ ಆಮದು ನಿಲ್ಲಿಸಿ

ಕ್ಯಾಂಪ್ಕೋ ಆಗ್ರಹ

ಡಿಜಿಎಫ್‌ಟಿ ಮಹಾ ನಿರ್ದೇಶಕ ಅನುಪ್ ಪೂಜಾರಿ ಅವರನ್ನು ಕ್ಯಾಂಪ್ಕೋ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಹಾಗೂ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ಭಂಡಾರಿ ಅವರು ಭೇಟಿಯಾಗಿ ಮನವಿ ಸಲ್ಲಿಸಿದರು. ವಲಯ ವ್ಯವಸ್ಥಾಪಕ ರಾಜೇಶ್ ಖೇರ್ ಉಪಸ್ಥಿತರಿದ್ದರು.

ಮಂಗಳೂರು,ಫೆ.16: ಸಾಪ್ತಾದೇಶಗಳಿಂದ ಶೂನ್ಯ ಸುಂಕದಲ್ಲಿ ಅಡಿಕೆ ಆಮದು ಮಾಡಿಕೊಳ್ಳುವುದನ್ನು ಸಂಪೂರ್ಣ ನಿಲ್ಲಿಸುವಂತೆ ಕೇಂದ್ರ ಸರಕಾರವನ್ನು ಕ್ಯಾಂಪ್ಕೋ ಸಂಸ್ಥೆ ಆಗ್ರಹಿಸಿದೆ.

ಕಳೆದ 9 ತಿಂಗಳಿಂದ ಸುಮಾರು 500 ಕೋ.ರೂ.ಗೂ ಮಿಕ್ಕಿದ ಮೌಲ್ಯದ ಅಡಿಕೆ ಶೂನ್ಯ ಅಮದು ಸುಂಕದಲ್ಲಿ ಸಾಪ್ತಾ ದೇಶಗಳಿಂದ ಭಾರತಕ್ಕೆ ಬಂದಿದೆ. ಈ ರೀತಿ ಆಮದಾಗುತ್ತಿರುವ ಅಡಿಕೆಯಲ್ಲಿ ಸುಮಾರು ಶೇ. 63ರಷ್ಟು ಬಾಂಗ್ಲಾದ ಮೂಲಕ ನಮ್ಮ ದೇಶಕ್ಕೆ ಬಂದಿದೆ ಹಾಗೂ ಇದು ಬಾಂಗ್ಲಾದಲ್ಲಿ ಬೆಳೆಯುವ ಅಡಿಕೆ ಪ್ರಮಾಣಕ್ಕಿಂತಲೂ ಹಲವು ಪಟ್ಟು ಅಧಿಕ. ಇಂಡೋನೇಷಿಯಾ ಮತ್ತು ಇತರ ರಾಷ್ಟ್ರಗಳಿಂದ ಬಾಂಗ್ಲಾಕ್ಕೆ ಬಂದ ಅಡಿಕೆ ಮೂಲ ರಾಷ್ಟ್ರದ ನಕಲು ಪ್ರಮಾಣ ಪತ್ರದ ಮೂಲಕ ಭಾರತಕ್ಕೆ ಆಮದಾಗುತ್ತಿದೆ ಎಂಬ ಗುಮಾನಿ ಇದೆ. ಈ ಅಕ್ರಮ ವ್ಯಾಪಾರದಿಂದ ಕೇಂದ್ರ ಸರಕಾರದ ಬೊಕ್ಕಸಕ್ಕೆ 500 ಕೋ. ರೂ. ಗಿಂತಲೂ ಅಧಿಕ ನಷ್ಟವಾಗಿದೆ ಎಂದು ಕ್ಯಾಂಪ್ಕೋ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಬೇಡಿಕೆಗಳು

ಭಾರತದ ಬೇಡಿಕೆ ಪ್ರಮಾಣದಷ್ಟು ಅಡಿಕೆಯನ್ನು 12 ರಾಜ್ಯಗಳಲ್ಲಿ ಬೆಳೆಸಲಾಗುತ್ತಿರುವುದರಿಂದ ಸಾಪ್ತಾ ಮತ್ತು ಸಾರ್ಕ್ ದೇಶಗಳಿಂದ ಆಮದಾಗುವ ಅಡಿಕೆಯನ್ನು ರೈತರ ಹಿತದೃಷ್ಟಿಯಿಂದ ಸಂಪೂರ್ಣ ಸ್ಥಗಿತಗೊಳಿಸಬೇಕು. ಕೇಂದ್ರ ಸರಕಾರದ ಡಿಜಿಎಫ್‌ಟಿ ಅಧಿಕಾರಿಗಳು ಆಮದಾಗುವ ಅಡಿಕೆ ಮೇಲೆ ಸೂಕ್ಷ್ಮ ನಿಗಾ ವಹಿಸಬೇಕು ಮತ್ತು ಆಮದು ಅಡಿಕೆಯ ಪ್ರಸಕ್ತ ಕನಿಷ್ಠ ದರ ಹೆಚ್ಚಿಸಿ 115 ರೂಪಾಯಿ ನಿಗದಿಪಡಿಸುವುದು, ಸಾರ್ಕ್ ಮತ್ತು ಸಾಪ್ತಾ ದೇಶಗಳಿಂದ ಬರುವ ಅಡಿಕೆ ಆಮದಿನ ಸುಂಕವನ್ನು ಶೇ. 150 ವಿಧಿಸಲು ಮುಂದಿನ ಬಜೆಟ್‌ನಲ್ಲಿ ಕ್ರಮಕೈಗೊಳ್ಳುವುದು, ಅಡಿಕೆ ಕೃಷಿ ಯಾಂತ್ರೀಕರಣಕ್ಕೆ ಕೇಂದ್ರ ಸರಕಾರ ಸಬ್ಸಿಡಿ ನೀಡುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸಲಾಗಿದೆ ಎಂದು ಅವರು ತಿಳಿಸಿದರು.

ತಾನು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಇತ್ತೀಚೆಗೆ ಹೊಸದಿಲ್ಲಿಗೆ ಭೇಟಿ ನೀಡಿದ ಸಂದರ್ಭ ರಾಜ್ಯಸಭಾ ಸದಸ್ಯ ಆಸ್ಕರ್ ಫೆರ್ನಾಂಡಿಸ್, ಸಂಸದರಾದ ನಳಿನ್ ಕುಮಾರ್ ಕಟೀಲು, ವಿಶ್ವನಾಥ್, ಧ್ರುವನಾರಾಯಣ್, ಶಿವರಾಮೇಗೌಡ ಹಾಗೂ ಡಿಜಿಎಫ್‌ಟಿ ಮಹಾ ನಿರ್ದೇಶಕ ಅನುಪ್ ಪೂಜಾರಿ ಮೊದಲಾದವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗಿದೆ ಎಂದರು.

ನೇರ ತೆರಿಗೆ ಪ್ರಸ್ತಾಪ

ಸಹಕಾರಿ ಸಂಸ್ಥೆಗಳಿಗೆ ನೇರ ತೆರಿಗೆ ಸಂಹಿತೆ ಸೆಕ್ಷನ್ 80 ಪಿಯಲ್ಲಿ ನೀಡಿರುವ ವಿನಾಯತಿ ಹಿಂದೆಗೆದುಕೊಳ್ಳುವ ಕೇಂದ್ರ ಸರಕಾರದ ಪ್ರಸ್ತಾಪ ದೇಶದಲ್ಲಿ ಸಕ್ರಿಯವಾಗಿರುವ 6 ಲಕ್ಷಕ್ಕೂ ಮಿಕ್ಕಿದ ಸಹಕಾರಿ ಸಂಸ್ಥೆಗಳಿಗೆ ಮಾರಕವಾಗಲಿದೆ ಮತ್ತು ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ದೇಶದ ಆರ್ಥಿಕತೆ ಬೆನ್ನೆಲುಬಾದ ಕೃಷಿಕ ಮತ್ತು ಬಡಜನತೆಗೆ ಹಳ್ಳಿ ಪ್ರದೇಶಗಳಲ್ಲಿ ಬ್ಯಾಂಕ್‌ನಂತೆ ಸೇವೆ ಸಲ್ಲಿಸುತ್ತಿರುವ ಈ ಸಹಕಾರಿ ಸಂಸ್ಥೆಗಳನ್ನು ಸಂರಕ್ಷಿಸುವುದು ಸರಕಾರದ ಸಾಂವಿಧಾನಿಕ ಕರ್ತವ್ಯ. ಆದುದರಿಂದ ಸೂಚಿತ ನೇರ ತೆರಿಗೆ ಸಂಹಿತೆಯಲ್ಲಿ ಆದಾಯ ತೆರಿಗೆ 80ಪಿ ಕಲಂನಲ್ಲಿ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆಯಿಂದ ಇರುವ ವಿನಾಯಿತಿ ಹಿಂದೆ ಇದ್ದ ಹಾಗೆ ಉಳಿಸಿಕೊಳ್ಳಬೇಕು ಎಂದು ಕೊಂಕೋಡಿ ಪದ್ಮನಾಭ ಆಗ್ರಹಿಸಿದರು.

ಮೇಲಿನ ವಿಚಾರಗಳಿಗೆ ಸಂಬಂಧಿಸಿದಂತೆ ಬಜೆಟ್ ಅಧಿವೇಶನದ ಹೊತ್ತಿಗೆ ಅಡಿಕೆ ಬೆಳೆಯುವ ಪ್ರದೇಶಗಳ ಜನಪ್ರತಿನಿಧಿಗಳ ಸಭೆ ಕರೆಯಲು ಉದ್ದೇಶಿಸಲಾಗಿದೆ ಮತ್ತು ಎಲ್ಲ ಸಂಸದರ ನಿಯೋಗವನ್ನು ಕೃಷಿ ಸಚಿವ ಶರದ್ ಪವಾರ್ ಮತ್ತು ವಾಣಿಜ್ಯ ಸಚಿವ ಆನಂದ್ ಶರ್ಮ ಅವರ ಬಳಿಗೆ ಕರೆದೊಯ್ಯಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ಕ್ಯಾಂಪ್ಕೋ ಉಪಾಧ್ಯಕ್ಷ ಕೆ. ಸತೀಶ್ಚಂದ್ರ ಭಂಡಾರಿ, ವ್ಯವಸ್ಥಾಪಕ ನಿರ್ದೇಶಕ ಎಂ. ಸುರೇಶ್ ಭಂಡಾರಿ ಮೊದಲಾದವರು ಉಪಸ್ಥಿತರಿದ್ದರು.

ವಿತ್ತೀಯ ಸೇರ್ಪಡೆಯಿಂದ ಸ್ಥಿರತೆ

(ಒಂದನೇ ಪುಟದಿಂದ)

ಅಂದು–ಇಂದು

2002ರಲ್ಲಿದ್ದಂತಹ ಆರ್ಥಿಕ ಸಂಕಷ್ಟ ಈಗಿಲ್ಲ, ಆಗ 70 ಕೋಟಿ ಜನರು ಬ್ಯಾಂಕಿಂಗ್ ಸೌಲಭ್ಯವನ್ನು ಪಡೆಯುತ್ತಿರಲಿಲ್ಲ, ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುತ್ತಿರಲಿಲ್ಲ, ಅಂದು ಐಸಿಐಸಿಐ ಬ್ಯಾಂಕ್ 70–80 ಶಾಖೆಗಳನ್ನು ಹೊಂದಿತ್ತು. 2002ರಲ್ಲಿ ಶೇ.94 ಗ್ರಾಹಕರು ಬ್ಯಾಂಕ್ ಶಾಖೆಗಳ ಮೂಲಕವೇ ವ್ಯವಹರಿಸುತ್ತಿದ್ದರು. ಸಣ್ಣಪುಟ್ಟ ಕೆಲಸಗಳಿಗೆ ಆಗಿಂದಾಂಗ್ಯೆ ಬ್ಯಾಂಕ್‌ಗಳಿಗೆ ಬರುತ್ತಿದ್ದರು. ತಮ್ಮ ಬ್ಯಾಂಕ್ ತಂತ್ರಜ್ಞಾನವನ್ನು ಅಳವಡಿಸುವ ಮೂಲಕ ಅಭಿವೃದ್ಧಿ ಸಾಧಿಸಿತು. ಆಗಲೇ ತಮ್ಮ ಬ್ಯಾಂಕ್ ಅಧ್ಯಕ್ಷರಾಗಿದ್ದ ನಾರಾಯಣನ್ ವಾಘುಲ್ ವಿತ್ತೀಯ ಸೇರ್ಪಡೆಯನ್ನು ಪ್ರತಿಪಾದಿಸಿದ್ದರು. 2009ರಲ್ಲಿ ಶಾಖಾ ರಹಿತವಾಗಿ ಬ್ಯಾಂಕಿಂಗ್ ಸೌಲಭ್ಯವನ್ನು ಕೊಡುವ ವಿತ್ತೀಯ ಸೇರ್ಪಡೆ ಯೋಜನೆ ಜಾರಿಗೆ ಬಂತು. ಈಗ ಶೇ.15 ವ್ಯವಹಾರ ಮಾತ್ರ ಶಾಖೆಗಳ ಮೂಲಕ ನಡೆಯುತ್ತಿದೆ. ಉಳಿದೆಲ್ಲ ವ್ಯವಹಾರ ಎಟಿಎಂ, ಕಾಲ್ ಸೆಂಟರ್, ಇಂಟರ್‌ನೆಟ್‌ನಂತಹ ಮಾಧ್ಯಮ ಮೂಲಕ ನಡೆಯುತ್ತಿದೆ ಎಂದು ಕಾಮತ್ ವಿಶ್ಲೇಷಿಸಿದರು.

ತಂತ್ರಜ್ಞಾನದ ಅಭಿವೃದ್ಧಿಯಿಂದ ದಕ್ಷತೆ ಹೆಚ್ಚಿದೆ, ಖರ್ಚು ಕಡಿಮೆಯಾಗುತ್ತಿದೆ. ಇದರಿಂದಾಗಿಯೇ ಬ್ಯಾಂಕುಗಳು ವಿಮೆ, ಮ್ಯೂಚುವಲ್ ಫಂಡ್‌ನಂತಹ ಬ್ಯಾಂಕೇತರ ಉತ್ಪನ್ನಗಳನ್ನು ಜಾರಿಗೆ ತರಲು ಸಾಧ್ಯವಾಯಿತು ಎಂದು ಕಾಮತ್ ಹೇಳಿದರು.

ದೇಶದ ಜಿಡಿಪಿ ಶೇ.6 ಆಯಿತು ಎಂದು ಚಿಂತೆ ಪಡಬೇಕಾಗಿಲ್ಲ, ಇದು ತಾತ್ಕಾಲಿಕ. ಚೀನದೊಂದಿಗೆ ಹೋಲಿಕೆ ಮಾಡಿಕೊಳ್ಳಬೇಕಾದ ಅಗತ್ಯವೂ ಇಲ್ಲ, ತಂತ್ರಜ್ಞಾನದ ಅಭಿವೃದ್ಧಿ ಶಾಶ್ವತ. ಇದು ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯನ್ನು (ಇಂಕ್ಲುಸಿವ್ ಡೆವಲಪ್‌ಮೆಂಟ್) ಸಾಧಿಸುತ್ತದೆ, ಸಾಧಿಸಬೇಕು ಎಂದು ಕಾಮತ್ ಹೇಳಿದರು.

ಟಿಎಂಎ ಪೈ ಸಂಬಂಧ

ತಾನು ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಓದುತ್ತಿರುವ ಸಂದರ್ಭ ಒಂದು ಮಧ್ಯಾಹ್ನ ಡಯಾನ ಸರ್ಕಲ್ ಬಳಿ ಇದ್ದ ಡಾ|ಟಿ.ಎಂ.ಎ.ಪೈ ಅವರನ್ನು ಭೇಟಿಯಾಗಲು ಬಂದಿದ್ದೆ. ಅವರು ಆತ್ಮೀಯವಾಗಿ ಮನೆಗೆ ಕರೆದೊಯ್ದು ಉಪಚರಿಸಿದರು. ಅನಂತರವೂ ಡಾ| ರಾಮದಾಸ್ ಪೈ, ಸತೀಶ್ ಪೈಯವರು ಅದೇ ಸಂಬಂಧವನ್ನು ಇಟ್ಟುಕೊಂಡಿದ್ದಾರೆಂದು ಕೆ.ವಿ.ಕಾಮತ್ ಹೇಳಿದರು.

ಮಣಿಪಾಲ ವಿ.ವಿ. ಕುಲಾಧಿಪತಿ ಡಾ| ರಾಮದಾಸ್ ಎಂ. ಪೈ ಅವರು ಪ್ರಶಸ್ತಿ ಪ್ರದಾನ ಮಾಡಿ ಟ್ಯಾಪ್ಮಿಯ ಎರಡು ಬ್ಲಾಕ್‌ಗಳನ್ನು ಡಾ|ಟಿ.ಎಂ.ಎ.ಪೈ ಬ್ಲಾಕ್ ಮತ್ತು ಕೆ.ಕೆ.ಪೈ ಬ್ಲಾಕ್ ಎಂದು ಘೋಷಿಸಿದರು. ಕೆ.ಕೆ.ಪೈ ಟ್ರಸ್ಟ್ ಅಧ್ಯಕ್ಷ, 'ಉದಯವಾಣಿ' ಪ್ರಧಾನ ಸಂಪಾದಕ ಟಿ.ಸತೀಶ್ ಯು. ಪೈ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟಿ ಕೆ.ಎಂ.ಉಡುಪ ಸ್ವಾಗತಿಸಿ, ಕಾರ್ಯದರ್ಶಿ ಡಾ|ಕೆ.ಕೆ.ಅಮ್ಮಣ್ಣಾಯ ಕಾರ್ಯಕ್ರಮ ನಿರ್ವಹಿಸಿದರು. ಟ್ಯಾಪ್ಮಿ ಡೀನ್ (ಅಭಿವೃದ್ಧಿ) ಡಾ|ಚೌಧರಿ ಪ್ರಸಾದ್ ವಂದಿಸಿದರು.

ವಾಘುಲ್ ಹೇಳಿದಂತೆ...

2002ರಲ್ಲಿ ಐಸಿಐಸಿಐ ಬ್ಯಾಂಕ್ ಅಧ್ಯಕ್ಷರಾಗಿದ್ದ ನಾರಾಯಣನ್ ವಾಘುಲ್ ಅವರಿಗೆ ಕೆ.ಕೆ.ಪೈ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿದ ಸಂದರ್ಭ ತನ್ನ ಬ್ಯಾಂಕ್ ಸಾಧನೆಗೆ ಸಿಇಒ ಆಗಿದ್ದ ಕೆ.ವಿ.ಕಾಮತ್ ಕಾರಣ ಎಂದು ಹೇಳಿದ್ದರು ಎಂಬುದನ್ನು ಶುಭಾಶಂಸನೆಗೈದ ಮಣಿಪಾಲ ವಿ.ವಿ. ಸಹಕುಲಾಧಿಪತಿ ಡಾ| ಎಚ್.ಎಸ್.ಬಲ್ಲಾಳ್ ಸ್ಮರಿಸಿಕೊಂಡರು.

ಪಶ್ಚಿಮಘಟ್ಟದಲ್ಲಿ ಧಾರಾಕಾರ ಮಳೆ

ಸಿದ್ದಾಪುರ, ಫೆ. 16: ಪಶ್ಚಿಮ ಘಟ್ಟದ ತಪ್ಪಲಿನ ಹಲವು ಪ್ರದೇಶಗಳಲ್ಲಿ ಶನಿವಾರ ಬೆಳಗ್ಗಿನಿಂದ ಮೋಡ ಕವಿದ ವಾತಾವರಣವಿದ್ದು, ಮಧ್ಯಾಹ್ನ ಗುಡುಗು, ಸಿಡಿಲಿನಿಂದ ಕೂಡಿ ಧಾರಾಕಾರ ಮಳೆ ಸುರಿದಿದೆ.

ಮಡಾಮಕ್ಕಿ, ಆರ್ಡಿ, ಅಲ್ಬಾಡಿ, ಬೆಳ್ವೆ ಹಾಯ್ಕಾಡಿ, ಅಮಾಸೆಬೈಲು, ಹೊಸಂಗಡಿ, ಹಳ್ಳಿಹೊಳೆ, ಕಮಲಶಿಲೆ ಉಳ್ಳೂರು ಮುಂತಾದ ಪ್ರದೇಶಗಳಲ್ಲಿ ಮಧ್ಯಾಹ್ನ ಗುಡುಗು, ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆ ಸುರಿದಿದೆ.

ಅಡಿಕೆ ಕೃಷಿಕರಿಗೆ ನಷ್ಟ: ಈ ಭಾಗದಲ್ಲಿ ಅಡಿಕೆ ಫಸಲು ಕೊಯ್ಲಿಗೆ ಬಂದಿದ್ದರಿಂದ ಕೃಷಿಕರು ಅಡಿಕೆ ಕಟಾವು ಮಾಡಿ ಅಂಗಳದಲ್ಲಿ ಒಣಗಲು ಹಾಕಿದ್ದರು. ಮಳೆ ಬರುವ ವೇಳೆ ಎಚ್ಚರಗೊಂಡು ಅಡಿಕೆ ತೆರವುಗೊಳಿಸಲು ಪ್ರಯತ್ನಿಸಿದರು. ಆದರೂ ಸ್ವಲ್ಪ ಮಟ್ಟಿನ ಹಾನಿ ಸಂಭವಿಸಿದೆ.

ಕುಂದಾಪುರ: ಭಾರೀ ಮಳೆ

ಕುಂದಾಪುರ, ಫೆ. 16: ಕುಂದಾಪುರ ತಾಲೂಕಿನಾದ್ಯಂತ ಶನಿವಾರ ಬೆಳಗ್ಗೆ ಸುಮಾರು 1 ಗಂಟೆ ಕಾಲ ಧಾರಾಕಾರ ಮಳೆ ಸುರಿಯಿತು. ಕುಂದಾಪುರ, ಗಂಗೊಳ್ಳಿ, ಶಂಕರನಾರಾಯಣ, ಸಿದ್ದಾಪುರ, ಹಳ್ಳಿಹೊಳೆ, ಬೈಂದೂರು, ಶಿರೂರು, ಉಪ್ಪುಂದ, ನಾಗೂರು, ನಾವುಂದದಲ್ಲಿ ಧಾರಾಕಾರ ಸುರಿದ ಮಳೆ ಮಳೆಗಾಲ ನೆನಪಿಸಿತು.

ಮಳೆಯಿಂದ ಯಾವುದೇ ಅನಾಹುತ ಸಂಭವಿಸಿಲ್ಲ, ಅನೇಕ ಸಭೆ ಸಮಾರಂಭಗಳಿಗೆ ತೊಂದರೆ ಉಂಟಾಯಿತು.

ಕೊಲ್ಲೂರು: ಕೊಲ್ಲೂರು, ಹಾಲ್ಕಲ್, ಆರೆಶಿರೂರು, ಜಡ್ಕಲ್, ಮುದೂರು, ಚಿತ್ತೂರು, ಇಡೂರು-ಕುಂಜ್ಞಾಡಿ, ದೇವಲ್ಕುಂದ ಪರಿಸರದಲ್ಲಿ ಧಾರಾಕಾರ ಮಳೆಯಾಗಿದೆ.

ಬಂಟ್ವಾಳ: ಆಲಿಕಲ್ಲು ಮಳೆ

ಬಂಟ್ವಾಳ, ಫೆ. 16: ತಾಲೂಕಿನಾದ್ಯಂತ ಶನಿವಾರ ಮಧ್ಯಾಹ್ನ ಉತ್ತಮ ಮಳೆಯಾಗಿದ್ದು ನರಿಕೊಂಬು ಪುತ್ರೋಟಿಬೈಲು ಎಂಬಲ್ಲಿ ಆಲಿಕಲ್ಲು ಸುರಿದಿದೆ. ನಗರ ಪ್ರದೇಶ ಬಿ.ಸಿ.ರೋಡಿನಲ್ಲಿ ರಸ್ತೆಯಲ್ಲಿ ನೀರು ಹರಿದು ಹೋಗುವಷ್ಟು ಮಳೆಯಾಗಿದೆ.

ಅರಸೀಕೆರೆ: ಕಾರು ಅಪಘಾತ; ಐದು ಸಾವು

ಕುಂದಾಪುರ ಮೂಲದ ಒಂದೇ ಕುಟುಂಬದವರು

ಅಪಘಾತದ ತೀವ್ರತೆಗೆ ನಜ್ಜುಗುಜ್ಜಾದ ಕಾರು.

ವಿಜಯಲಕ್ಷ್ಮೀ

ಶುಭಾ

ಸುಧಾ

ಕುಂದಾಪುರ/ಅರಸೀಕೆರೆ, ಫೆ. 16: ಹಾಸನ ಜಿಲ್ಲೆಯ ಅರಸೀಕೆರೆಯ ಹೊರ ವಲಯದ ಬಂಡೀಹಳ್ಳಿ ಗೇಟ್ ದೊಡ್ಡಕೆರೆಯ ಬಳಿ ಶುಕ್ರವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕಾರಿನಲ್ಲಿದ್ದ ಕುಂದಾಪುರ ಮೂಲದ ಒಂದೇ ಕುಟುಂಬದ ಎಲ್ಲ ಐವರು ಮೃತಪಟ್ಟಿದ್ದಾರೆ.

ಕುಂದಾಪುರ ಕೋಡಿಯ ವಿಜಯಲಕ್ಷ್ಮೀ (54), ಅವರ ಮಕ್ಕಳಾದ ಶುಭಾ (25), ಸುಧಾ (23), ಶುಭಾ ಅವರ ಪತಿ ಗಂಗೊಳ್ಳಿಯ ಸುಬ್ರಹ್ಮಣ್ಯ ಶೇರುಗಾರ್ (32) ಮತ್ತು ಮಗು ಆದೀಶ್ (8 ತಿಂಗಳು) ಮೃತಪಟ್ಟವರು.

ತುಮಕೂರಿನಿಂದ ಹಾಸನ ಮಾರ್ಗವಾಗಿ ಕುಂದಾಪುರಕ್ಕೆ ಬರುತ್ತಿದ್ದ ಇಂಡಿಕಾ ಕಾರು ರಸ್ತೆ ಪಕ್ಕದ ಮರಕ್ಕೆ ಢಿಕ್ಕಿ ಹೊಡೆಯಿತು. ಮೂವರು ಸ್ಥಳದಲ್ಲೇ ಮೃತಪಟ್ಟರೆ ಸುಬ್ರಹ್ಮಣ್ಯ ಮತ್ತು ಶುಭಾ ತುಮಕೂರು ಸರಕಾರಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದರು.

ಕುಂದಾಪುರ ಕೋಡಿಯ ರಾಮ ಭಜನಾ ಮಂದಿರ ಬಳಿಯ ನಿವಾಸಿಗಳಾದ ವೆಂಕಟರಮಣ ಹೋಬಳಿದಾರ – ವಿಜಯಲಕ್ಷ್ಮೀ ದಂಪತಿಯ ಪುತ್ರಿ ಶುಭಾ ಅವರಿಗೆ ಗಂಗೊಳ್ಳಿಯ ಸಾಂತಯ್ಯನಕೇರಿ ನಿವಾಸಿ ಭಾಸ್ಕರ ಶೇರುಗಾರ್ ಅವರ ಪುತ್ರ ಸುಬ್ರಹ್ಮಣ್ಯ ಅವರೊಂದಿಗೆ ಎರಡು ವರ್ಷಗಳ ಹಿಂದೆ ವಿವಾಹವಾಗಿತ್ತು.

ಸುಬ್ರಹ್ಮಣ್ಯ ತುಮಕೂರಿನಲ್ಲಿ ಎಂಜಿನಿಯರ್ ಆಗಿದ್ದು, ಶುಭಾ ತುಮಕೂರಿನಲ್ಲಿ ಕರ್ಣಾಟಕ ಬ್ಯಾಂಕ್ ಉದ್ಯೋಗಿಯಾಗಿದ್ದಾರೆ. ಶುಭಾ ಅವರ ಸಹೋದರಿ ಸುಧಾ ಬೆಂಗಳೂರಿನ ಮುತ್ತೂಟ್ ಫೈನಾನ್ಸ್‌ನಲ್ಲಿ ಉದ್ಯೋಗಿಯಾಗಿದ್ದರು.

ಶುಭಾ ಅವರಿಗೆ ಇತ್ತೀಚೆಗೆ ಹೆರಿಗೆಯಾಗಿದ್ದು, ಮೊಮ್ಮಗನ ಪಾಲನೆಗೆ ವಿಜಯಲಕ್ಷ್ಮೀ ತುಮಕೂರಿನಲ್ಲಿ ನೆಲೆಸಿದ್ದರು. ವೆಂಕಟರಮಣ ಅವರು ಊರಿನಲ್ಲಿದ್ದರು. ಅವರಿಗೆ ಒಟ್ಟು ಮೂವರು ಮಕ್ಕಳು. ಮೊದಲ ಪುತ್ರಿ ಮದುವೆಯಾಗಿ ಗಂಡನ ಮನೆಯಲ್ಲಿದ್ದಾರೆ.

ಅಪಘಾತದಲ್ಲಿ ಸಾವಿಗೀಡಾದ ಸುಧಾ ಮತ್ತು ಶುಭಾ ಅವರು ಪಿಯುಸಿಯಿಂದ ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ನಡೆಸಿದ್ದರು.

ಮೃತದೇಹ ಕುಂದಾಪುರಕ್ಕೆ: ಮೃತರ ಸಂಬಂಧಿಕರು ಅರಸೀಕೆರೆಗೆ ತೆರಳಿದ್ದು, ಅರಸೀಕೆರೆ ಸರಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಯ ಬಳಿಕ ಶವಗಳನ್ನು ಶನಿವಾರ ಸಂಜೆ ವೇಳೆಗೆ ಕುಂದಾಪುರಕ್ಕೆ ತರಲಾಯಿತು.

ನಿಶ್ಚಿತಾರ್ಥಕ್ಕೆ ಆಗಮಿಸುತ್ತಿದ್ದರು

ಸುಧಾ ಅವರ ನಿಶ್ಚಿತಾರ್ಥ ಫೆ. 18ರಂದು ಕುಂದಾಪುರದಲ್ಲಿ ನಡೆಯಲಿದ್ದು, ಅದಕ್ಕೋಸ್ಕರ ಎಲ್ಲರೂ ಒಟ್ಟಿಗೆ ಶುಕ್ರವಾರ ರಾತ್ರಿ 11.30ಕ್ಕೆ ತುಮಕೂರಿನ ಮನೆಯಲ್ಲಿ ಊಟ ಮುಗಿಸಿ ಕಾರಿನಲ್ಲಿ ಹೊರಟಿದ್ದರು. ರಾತ್ರಿ 1ರ ಹೊತ್ತಿಗೆ ಅರಸೀಕೆರೆ ಹೊರವಲಯದ ಕೋಡಿಹಳ್ಳಿ ಬಳಿ ರಸ್ತೆ ಪಕ್ಕದ ಮರಕ್ಕೆ ಕಾರು ಢಿಕ್ಕಿ ಹೊಡೆದಿದೆ.

ಸುಬ್ರಹ್ಮಣ್ಯ ಮತ್ತು ಶುಭಾ ಕಾರಿನ ಎದುರಿನ ಸೀಟಿನಲ್ಲಿದ್ದರು ಎಂದು ಹೇಳಲಾಗಿದೆ.

ಅಪಘಾತ ಏಕಾಯಿತು?

ಅಪಘಾತ ನಡೆದ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿದ್ದು, ನೇರವಾಗಿತ್ತು. ರಸ್ತೆಯೂ ಉತ್ತಮವಾಗಿತ್ತು. 11.30ಕ್ಕಷ್ಟೇ ಮನೆಯಿಂದ ಹೊರಟಿದ್ದರಿಂದ ನಿದ್ದೆ ಮಂಪರಿನ ಸಾಧ್ಯತೆಯೂ ಕಡಿಮೆ. ಒಂದೋ ಕಾರಿನ ಟೈರ್ ಸ್ಫೋಟ ಆಗಿರಬೇಕು. ಇಲ್ಲವೇ ಎದುರಿನಿಂದ ಯಾವುದಾದರೂ ವಾಹನ ಓವರ್‌ಟೇಕ್ ಮಾಡಿಕೊಂಡು ಬಂದಾಗ ಅದನ್ನು ತಪ್ಪಿಸುವ ಹಂತದಲ್ಲಿ ಹತೋಟಿ ತಪ್ಪಿ ಮರಕ್ಕೆ ಢಿಕ್ಕಿಯಾಗಿರುವ ಸಾಧ್ಯತೆ ಕಾಣಿಸುತ್ತದೆ ಎಂದು ಸ್ಥಳೀಯರು ಅಭಿಪ್ರಾಯಿಸಿದ್ದಾರೆ. ಅಪಘಾತದ ತೀವ್ರತೆಗೆ ಕಾರು ನಜ್ಜುಗುಜ್ಜಾಗಿದೆ.

ಕಾರ್ಕಳ: ಎರಡನೇ ದಿನವೂ ಸುರಿದ ಮಳೆ

ಕಾರ್ಕಳ, ಫೆ.16: ತಾಲೂಕಿನ ಹೆಚ್ಚಿನ ಕಡೆ ನಿರಂತರ ಎರಡನೇ ದಿನವೂ ಮಳೆ ಸುರಿದಿದೆ. ಹೊಸ್ಮಾರು, ಮಾಳ, ಬಜಗೋಳಿ, ಕೆರ್ವಾಶೆ, ಅಜೆಕಾರು, ಕಡ್ತಲ, ಕಾಡುಹೊಳೆ, ಅಂಡಾರು ಮುಂತಾದೆಡೆ ಶನಿವಾರ ಮಧ್ಯಾಹ್ನ ಉತ್ತಮ ಮಳೆಯಾಗಿದೆ. ಹೆಬ್ರಿ, ಕುಕ್ಕುಂದೂರು, ಜಾರ್ಕಳ, ಸಾಣೂರು, ಬೈಲೂರಿನಲ್ಲಿ ಹನಿ ಮಳೆಯಾಗಿದೆ.

ಮೂಡಬಿದಿರೆಯಲ್ಲಿ ಮಳೆ

ಶನಿವಾರ ಅಪರಾಹ್ನ 1 ಗಂಟೆ ಕಾಲ ಮೂಡಬಿದಿರೆ ಪಡುಮಾರ್ನಾಡು, ಬೆಳುವಾಯಿ ಮೊದಲಾದ ಗ್ರಾಮಗಳಲ್ಲಿ ಭಾರೀ ಮಳೆ ಬಿತ್ತು. ಒಣಗಲು ಹಾಕಿದ ಕೃಷಿ ಉತ್ಪನ್ನಗಳನ್ನು ರಕ್ಷಿಸಲು ಕೃಷಿಕರು ಹರಸಾಹಸ ಪಡಬೇಕಾಯಿತು.

ಶ್ರೀರಂಗಪಟ್ಟಣದಲ್ಲಿ 4 ಸೆಂ.ಮೀ. ಮಳೆ

ಬೆಂಗಳೂರು, ಫೆ. 16: ಶನಿವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ 24 ತಾಸುಗಳಲ್ಲಿ ರಾಜ್ಯದ ಹಲವೆಡೆ ಮಳೆಯಾಗಿತ್ತು. ಶ್ರೀರಂಗಪಟ್ಟಣ, ರಾಯಲ್‌ಪಡು (ಕೋಲಾರ ಜಿಲ್ಲೆ) ಮತ್ತು ಮಧುಗಿರಿ (ತುಮಕೂರು ಜಿಲ್ಲೆ)ಯಲ್ಲಿ ಇತರೆಡೆಗಿಂತ ಅಧಿಕ ತಲಾ 4 ಸೆಂ.ಮೀ. ಮಳೆ ಬಿದ್ದಿತ್ತು.

ಕದ್ರಾ ಮತ್ತು ಪಾಂಡವಪುರ (ಮಂಡ್ಯ ಜಿಲ್ಲೆ) ತಲಾ 3, ಸುಳ್ಯ, ಕುಂದಾಪುರ, ಮೂಡಿಗೆರೆ ತಲಾ 2, ಮಾದಾಪುರ ಮತ್ತು ಬಾಳೆಹೊನ್ನೂರಿನಲ್ಲಿ ತಲಾ ಒಂದು ಸೆಂ.ಮೀ. ಮಳೆಯಾಗಿತ್ತು.

ಸೋಮವಾರ ಬೆಳಗ್ಗೆವರೆಗಿನ ಹವಾ ಮುನ್ಸೂಚನೆ ಪ್ರಕಾರ ರಾಜ್ಯದ ಹಲವೆಡೆ ಲಘುವಿನಿಂದ ಸಾಧಾರಣ ಮಳೆ ಬೀಳುವ ಸಂಭವವಿದೆ.

ಕರಾವಳಿ: ಶನಿವಾರವೂ ಮುಂದುವರಿದ ಮಳೆ

ಮಂಗಳೂರು/ ಉಡುಪಿ, ಫೆ. 16: ಕಳೆದ ಗುರುವಾರದಿಂದ ಇಳೆ ತಂಪಾಗಿಸಿದ ಮಳೆರಾಯ ಶುಕ್ರವಾರ ಉತ್ತಮವಾಗಿ ಸುರಿದು ಶನಿವಾರವೂ ಅಲ್ಲಲ್ಲಿ ಕಾಣಿಸಿಕೊಂಡಿದ್ದಾನೆ. ಕರಾವಳಿಯ ವಿವಿಧೆಡೆ ಶನಿವಾರವೂ ಅಲ್ಪಸ್ವಲ್ಪ ಮಳೆ ಬಂದಿದೆ.

ಸುಬ್ರಹ್ಮಣ್ಯದಲ್ಲಿ ಸಂಜೆ ವೇಳೆಗೆ ಉತ್ತಮ ಮಳೆ ಸುರಿದಿದ್ದು, ಶನಿವಾರದಿಂದ ಆರಂಭವಾದ ಕುಸುಮಾ ಸಾರಂಗದ ವಿಂಶತಿ ನಾಟಕೋತ್ಸವಕ್ಕೆ ಮಳೆಯಿಂದಾಗಿ ತೊಂದರೆಯಾಗಿದೆ. ಮಂಗಳೂರು ನಗರದಲ್ಲಿ ರಾತ್ರಿ ವೇಳೆ ಮಳೆಯಾಗಿದೆ.

ಬಜಪೆಯ ಪೆರಾರ ಹಾಗೂ ಮೂಡಬಿದಿರೆಯಲ್ಲಿ ಮಧ್ಯಾಹ್ನದ ವೇಳೆಗೆ ಮಳೆಯಾಗಿದೆ. ಸುರತ್ಕಲ್, ಕಿನ್ನಿಗೋಳಿ ಹಾಗೂ ಮೂಲ್ಕಿಯಲ್ಲಿ ಹನಿ ಮಳೆಯಾದರೆ, ಬಂಟ್ವಾಳದಲ್ಲಿ ಅಲ್ಲಲ್ಲಿ ಸ್ವಲ್ಪಸ್ವಲ್ಪ ಕಾಣಿಸಿಕೊಂಡಿದೆ. ಬಿ.ಸಿ.ರೋಡ್‌ನಲ್ಲಿ ಮಧ್ಯಾಹ್ನ ವೇಳೆಗೆ ಸಾಧಾರಣ ವರ್ಷಧಾರೆಯಾಗಿದೆ. ಬೆಳ್ತಂಗಡಿ ತಾಲೂಕಿನ ವೇಣೂರು, ಗುರುವಾಯನಕೆರೆ, ಕಡಬ, ಬೆಳ್ತಂಗಡಿ ಪೇಟೆ ಸೇರಿದಂತೆ ವಿವಿಧೆಡೆ ಮಧ್ಯಾಹ್ನ ವೇಳೆಗೆ ಉತ್ತಮ ಮಳೆಯಾಗಿದೆ. ಉಪ್ಪಿನಂಗಡಿ, ಮುಡಿಪು, ಇರಾ, ಕೋಟೆಕಾರು, ತೊಕ್ಕೊಟ್ಟು, ಉಳ್ಳಾಲ ಪರಿಸರದಲ್ಲಿ ರಾತ್ರಿ ವೇಳೆ ಮಳೆಯಾಗಿದೆ. ಸುಳ್ಯದಲ್ಲಿ ದಟ್ಟ ಮೋಡ ಕವಿದ ವಾತಾವರಣವಿತ್ತು.

ಉಡುಪಿಯಲ್ಲಿಯೂ ಹನಿಹನಿ ಮಳೆ ಬಂದಿತ್ತು. ಕುಂದಾಪುರ ಮತ್ತು ಕಾರ್ಕಳ ತಾಲೂಕಿನ ವಿವಿಧೆಡೆ ಉತ್ತಮ ಮಳೆಯಾಗಿದೆ.


ಶನಿವಾರ ಅಪರಾಹ್ನ 3.00 ಗಂಟೆಗೆ ಉಪಗ್ರಹ ತೆಗೆದ ಚಿತ್ರ.

Swarna
JEWELLERS
ಉಡುಪಿ ಮತ್ತು ಮಂಗಳೂರು
[illegible]
15-02-2013 ರ ಡ್ರಾ ಫಲಿತಾಂಶ
ADD - 95
ADE - 65
ADF - 04
ADG - 19
ADH - 68
ADI - 63
ADJ - 48
ADK - 15
ADL - 86
ADM - 88
ADN - 38
ADO - 25
ADP -26
BN - 44
BO - 52
BP - 53
BQ - 65
BR - 03
BS - 80
BT - 41
BU - 27
BV - 42
[illegible]

ಉದಯವಾಣಿ
[illegible]
ಹೆಲ್ಪ್‌ಲೈನ್
ಪ್ರಿಯ ಚಂದಾದಾರರೇ,
ಉದಯವಾಣಿ ಪತ್ರಿಕೆ ಸಕಾಲದಲ್ಲಿ
ನಿಮಗೆ ತಲುಪುತ್ತಿದೆಯಲ್ಲ?
ಇಲ್ಲವಾದಲ್ಲಿ ನಮ್ಮನ್ನು ಸಂಪರ್ಕಿಸಿ.
18004255234
ಶುಲ್ಕರಹಿತ ಕರೆ
helpline@manipalmedia.com
[illegible]